**ದಿನಾಂಕ:** 09.09.2023

ಅರ್ಜಿಯನ್ನು ರಾಷ್ಟ್ರೀಯ ಲೋಕ ಅದಾಲತ್ತ ಮುಂದೆ ತೆಗೆದುಕೊಳ್ಳಲಾಯಿತು. ಅರ್ಜಿದಾರರು ಮತ್ತು ಅವರನ್ನು ಪ್ರತಿನಿಧಿಸುವ ವಕೀಲರು ಹಾಜರು ಇರುತ್ತಾರೆ. ಎದುರುದಾರರನ್ನು ಪ್ರತಿನಿಧಿಸುವ ಕಚೇರಿಯ ಸಿಬ್ಬಂದಿಯು ಹಾಜರು ಇರುತ್ತಾರೆ. ನ್ಯಾಯಕೇತರ ಸದಸ್ಯರು ಸಹ ಹಾಜರು ಇರುತ್ತಾರೆ.

ಅರ್ಜಿದಾರರು ಮತ್ತು ಎದುರುದಾರರು ಜಂಟಿ ಜ್ಞಾಪನಾ ಪತ್ರವನ್ನು ಸಲ್ಲಿಸಿರುತ್ತಾರೆ ಮತ್ತು ವ್ಯಾಜ್ಯವನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲು ಒಪ್ಪಿಕೊಂಡಿರುತ್ತಾರೆ.

ಅರ್ಜಿದಾರರಾದ **Vijaykumar S/o Shamappa** ಇವರು ದಿನಾಂಕ **06.04.1993** ರಂದು ಅರ್ಜಿದಾರರ ಮನೆ ಇರುವ **Motakpalli** ಗ್ರಾಮದಲ್ಲಿ ಜನಿಸಿರುತ್ತಾರೆ ಎಂಬುದಾಗಿ ಹಾಗೂ ಅವರ ಜನನ ದಿನಾಂಕ ಎದುರುದಾರರ ಜನನ ರಜೀಷ್ಟರದಲ್ಲಿ ನೋಂದಣಿ ಆಗಿರುವುದಿಲ್ಲ ಎಂಬುದಾಗಿ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ಎದುರುದಾರರು ಅರ್ಜಿದಾರರ ಜನನವನ್ನು ಷರತ್ತುಬದ್ಧವಾಗಿ ಒಪ್ಪಿಕೊಂಡಿರುತ್ತಾರೆ.

ಎದುರುದಾರರ ಸಹಿ.

ಜಂಟಿ ಜ್ಞಾಪನಾ ಪತ್ರವನ್ನು ಪರಿಶೀಲಿಸಲಾಯಿತು. ಎದುರುದಾರರು ಜಂಟಿ ಜ್ಞಾಪನಾ ಪತ್ರದಲ್ಲಿ ಅರ್ಜಿದಾರರ ಜನನ ದಿನಾಂಕವನ್ನು ಷರತ್ತುಬದ್ಧವಾಗಿ ಅಂದರೆ ಮುಂದೆ ಉಂಟಾಗಬಹುದಾದ ಸಿವಿಲ್ ವ್ಯಾಜ್ಯ ಮತ್ತು ಅಂತಹ ಸಂದರ್ಭದಲ್ಲಿ ರುಜುವಾತಿನ ಭಾರಕ್ಕೆ ಅರ್ಜಿದಾರರು ಒಳಪಟ್ಟು, ವಿಳಂಬ ಶುಲ್ಕವನ್ನು ಅರ್ಜಿದಾರರ ಕಡೆಯಿಂದ ಭರಣಮಾಡಿಕೊಂಡು ಜನನ ದಿನಾಂಕವನ್ನು ಜನನ ರಜೀಷ್ಟರದಲ್ಲಿ ಅಳವಡಿಸಿಕೊಳ್ಳಲು ಒಪ್ಪಿಕೊಂಡಿರುತ್ತಾರೆ. ಸದರಿ ಸಂಗತಿಗೆ ಅರ್ಜಿದಾರರು ಸಹ ತಮ್ಮ ಒಪ್ಪಿಗೆ ಸೂಚಿಸಿರುತ್ತಾರೆ. ಆದ್ದರಿಂದ ಈ ಕೆಳಗಿನಂತೆ:

## ಆದೇಶ

ಅರ್ಜಿದಾರರ ಅರ್ಜಿಯನ್ನು ಈ ಮೂಲಕ ಈ ಕೆಳಗಿನಂತೆ

ಪುರಸ್ಕರಿಸಲಾಗಿದೆ.

ಅರ್ಜಿದಾರರಾದ **Vijaykumar S/o Shamappa** ಇವರು ದಿನಾಂಕ **06.04.1993** ರಂದು ಅರ್ಜಿದಾರರ ಮನೆ ಇರುವ **Motakpalli** ಗ್ರಾಮದಲ್ಲಿ ಜನಿಸಿರುತ್ತಾರೆ ಮತ್ತು ಸದರಿ ಜನನ ದಿನಾಂಕ ಮತ್ತು ಹೆಸರನ್ನು ಎದುರುದಾರರು ಮೇಲ್ಕಂಡ ಷರತ್ತಿಗೆ ಅನುಗುಣವಾಗಿ ವಿಳಂಬ ಶುಲ್ಕ ಭರಣ ಮಾಡಿಕೊಂಡು ಜನನ ರಜೀಷ್ಟರದಲ್ಲಿ ಅಳವಡಿಸಿಕೊಳ್ಳಲು ಈ ಮೂಲಕ ಆದೇಶಿಸಲಾಗಿದೆ.

ಅರ್ಜಿದಾರರು ಮತ್ತು ಎದುರುದಾರರ ಜಂಟಿ ಜ್ಞಾಪನಾ ಪತ್ರದ ಪ್ರಕಾರ ಅರ್ಜಿಯ ವಿಚಾರಣೆಯನ್ನು ಈ ಮೂಲಕ ಮುಕ್ತಾಯಗೊಳಿಸಲಾಗಿದೆ.

ಸಹಿ/–

**ನ್ಯಾಯಕೇತರ ಸಂಧಾನಕಾರರು**

ಸಹಿ/–

**(ಸುನೀಲ ಎಸ್. ತಳವಾರ)**

**ನ್ಯಾಯಿಕ ಸಂಧಾನಕಾರರು**